

ಹಸಿರು ಹೊದ್ದ ಕಪ್ಪತಗುಡ್ಡ



ಕೋಮು ಸೌಹಾರ್ದಕ್ಕೆ ಸಾಕ್ಷಿಯಾದ ಡಂಬಳ ರೊಟ್ಟಿ ಜಾತ್ರೆಯಲ್ಲಿ ಒಟ್ಟಾಗಿ ಭೋಜನ ಮಾಡುತ್ತಿರುವುದು

ಜಾಡಿಸಿ ಬಿಡ್ತಿತ್ತು, ಮಳೆ ಇಲ್ಲ ಬೆಳಿ ಇಲ್ಲ ಕಾಯಂ ಬರಗಾಲ ಮಂದಿ ಅನಿಸಿಕೊಂಡು ದುಡಿಯಾಗ ಮಂಗ್ಳೂರ, ಗೋವಾಕ್ ಹೋಗಾದ ತಪ್ಪಿರಲಿಲ್ಲ, ಈಗ ಎಷ್ಟಾ ಪಾಡರಿ ಸರ್, ಪುಣ್ಯಾತ್ಮ ಕಲಕೇರಿ ಗೌಡ್ರು, (ಎಸ್.ಎಸ್. ಪಾಟೀಲ) ಹಡಗಲಿ ಎಂ.ಪಿ. ಪ್ರಕಾಶ ಮಿನಿಸ್ಟರ್ ಆಗಿ ತುಂಗಭದ್ರ ನದಿ ನೀರ ಹರಿಸಿ, ಬ್ರಿಜ್ ಕಟ್ಟಿದ್ರು, ಹಾಂಗ್ ಹುಲಿಗುಡ್ಡ ಏತ ನೀರಾವರಿ ಹರಿಸಿ ಹಮ್ಮಿಗ್ಯಾಗ ಡ್ಯಾಂ ಕಟ್ಟಿದ ಮ್ಯಾಲ ನೋಡ್ರಿ ಎಲ್ಲೆಂದರಲ್ಲಿ ಒಂದೀಟೇನು ಪೂರ್ತ ಹಸಿರು ಕಾಣುವಂಗಾತು. ಗಂಗಾಪೂರದಾಗ ಸುಗರ್ ಕಾರ್ಖಾನೆ ಮಾಡಿ ರೈತರು ಒಂದಿಷ್ಟು ರೊಕ್ಕ ಕಂಡರು. ಭತ್ತ ಕಬ್ಬು ಕೈಗೆ ಹತ್ತಿದಂತಹ ಮುಂಡರಗಿ ಸುತ್ತ ಹತ್ತ ಹಳ್ಳಿ ಬೆಳದವು. ಪುಂಡಿ ಪಲ್ಲೇಕ ಸೊಪ್ಪು ಬೆಳೀಲಾರದ ಹೊಲದಾಗ ಈಗ ದಾಳಿಂಬೆ, ಗೋಡಂಬಿ, ದ್ರಾಕ್ಷಿ, ಬಾಳೆ, ರೇಷ್ಮಿ, ರೊಕ್ಕದ ಪೀಕು ರೈತರ ಕೈ ಹಿಡಿದಾವು.

ಸುಗರ್ ಫ್ಯಾಕ್ಟ್ರಿ ಬೆಳೀತು ನೋಡ್ರಿ ನಮ್ಮ ಮುಂಡ್ರಿಗಿ ಪ್ಯಾಟಿ ಹೀಂಗ ದೊಡ್ಡದಾತು, ಹೊಳಿ ನೀರ್ ಹಾಸಿಕೊಂಡು ಪೀಕ್ ತಗದಾವರು, ಸಂತಿಗೆ ಇಲ್ಲಿಗೆ ಬರಾಕ್ ಹತ್ತಿದ್ರು, ಅಂಗಡಿ ಮುಗ್ಗಟ್ಟು ಇರಲಿ, ಸೈಟ್ ಅಂತೂ ಬೆಂಗ್ಳೂರ್ ರೇಟಿಗೆ ಏರಿಸಿ ಕುಂತಾರ್, ಏನಾ ವ್ಯವಾರ ಮಾಡಿದ್ರು 80 ಕಿ.ಮಿ. ಅಂತ್ರಾ ಕಡಿಮೆ ಆಗಿ ಸೀದಾ ಜನಾ ಬೆಂಗ್ಳೂರ ಅಂತಾರ್ ನೋಡ್ರಿ ಸರ್.

ಮುಂಡರಗಿ ಮೊದ್ಲ ಹೈದ್ರಾಬಾದ್ ಕರ್ನಾಟಕಕ್ಕ ಸೇರಿ, ಕೊಪ್ಪ ಎಂಪಿ ಕ್ಷೇತ್ರಕ್ಕೆ ಹೋಗಿ ಈಗ ಇತ್ಲಾಗ ಮುಂಬೈ ಕರ್ನಾಟಕದ ಪ್ರಭಾವ ಇದ್ದು ಮತ್ ಹಾವೇರಿ ಲೋಕ್ಸಭಾ ಬಂತು. ಎಂತೆಂತಹ ರಾಜಕೀಯ ಘಟಾನುಘಟಿಗಳು ಇಲ್ಲಿ ಆಳಿ ಹೋದ್ರು, ಸಮಾಜ ಸೇವೆ ಮಾಡಿದ್ರೂ ಮುಂಡರಗಿ ಎಂಎಲ್ಎ ಕ್ಷೇತ್ರ ಶಿರಟ್ಟಿ, ಮತ್ ರೋಣಕ್ಕ ಅರ್ಧರ್ಧ ಹಂಚಿ ಹೋಗಿ ರಾಜಕೀಯ ರಂಗು ಕಳೆದುಕೊಂಡ್ತು ನೋಡ್ರಿ. ಆದ್ರ ಇಲ್ಲಿನ ಮುಂಡರಗಿ ಭೀಮರಾವ್ ಸ್ವಾತಂತ್ರ್ಯಕ್ಕಾಗಿ ತನ್ನ ಪ್ರಾಣ ಬಲಿಕೊಟ್ಟ, ಬ್ರಿಟಿಷರ ವಿರುದ್ಧ ಸೆಣಸಾಡುವಾಗ ನೋಡ್ರಿ, ತನ್ನ ಬಲಗೈ ಕಳೆದುಕೊಂಡರು. ಅದಾ ಕೈಯಾಗ ಕತ್ತಿ ಹಿಡಿದು ಹೋರಾಡಿ ವೀರಮರಣ ಅಪ್ಪಿ ಇಂದಿಗೂ ಅವರ ಹೆಸರ ಶಾಶ್ವತ ಐತಿ. ಪಟ್ಣಾ ಬೆಳದಂಗ್ನ ಮಂದೀ ಹೆಚ್ಚಾದ್ರು. ಹಾಂಗ್ನ ಸೈಟ್ ರೇಟು ಬೆಂಗ್ಳೂರು ಮೀರಿಸೈತಿ, ಇದೊಂದು ಕಡಿಗಿ ಇರ್ಲಿ, ಅದರ ಜತೀಗೆ ತಾಲ್ಲೂಕಿನ್ಯಾಗ ನೋಡಾ ಸ್ಥಳ ಜಿಗಿದು ಅದಾವು.

ತುಂಗಭದ್ರ ದಂಡಿ ಮ್ಯಾಲೆ ಸಿಂಗ್ಟಾಲೂರ ವೀರಭದ್ರೇಶ್ವರ ದೇವರು,

## ಹೋಳಿ ಹುಣ್ಣಿಮೆಯಲ್ಲಿ ಕಾಮದಹನ ಬಣ್ಣ ಇಲ್ಲ...

ಇಲ್ಲೊಂದು ಸ್ಪೆಷಲ್ ಏನಂದ್ರ, ಯುಗಾದಿ ಸಂದರ್ಭದಾಗ ಲಕ್ಷ್ಮಿಕನಕ ನರಸಿಂಹ ಜಾತ್ರೆ ಎಂಟತ್ತ ಜಾತಿವರ್ರ ಕೂಡಿ ಮಾಡ್ತಾರ, ಆಗ ಕಂಕಣ ಕಟ್ಟೋ ಹಿನ್ನಲೆಯೊಳಗ ಮುಂಡರಗಿ ಸೇರಿ ಒಂಬತ್ತು ಹಳ್ಯಾಗ ಯುವಕರಿಗೆ ಬಣ್ಣ ಆಡೋ ಯೋಗ ಇಲ್ಲ, ಕಾಮದಹನವಂತೂ ಇಲ್ಲವೆ ಇಲ್ಲ. ಹೀಗಾಗಿ ಹೊಯ್ಯಕೊಳ್ಳೋ ಬಾಯಿಗೆ ಹೋಳಿಗೆ ಸಿಗುತ್ತ, ಆದ್ರ ಕೈಯಾಗ ಬಾರಿಸಾಕ ಹಲಗೆ, ಬಣ್ಣ ಸಿಗೋದಿಲ್ಲ.

ಮುಂಡರಗಿಗೆ ಬಂದ ಬೀಗ್ರಿಗೆ ಪ್ರಸಿದ್ಧಿ ಹೊಂದಿದ ಬೀಡನಿಂದ ತಯ್ಯಾರಿಸಿದ ಈಳಿಗೆ ಕೊಟ್ಟು ಕಳಿಸೋದು ಮರೆಯಾಗಂಗಿಲ್ಲ.